**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್ ಸಿ ಸಂಖ್ಯೆ–185/2020**

**ಫಿರ್ಯಾದಿದಾರಃ–** ಸರಕಾರದ ಪರವಾಗಿ

**ಹೆಚ್ ಡಿ ಕೋಟೆ ಪೊಲೀಸ್ ಠಾಣೆ .**

**– ವಿರುದ್ಧ –**

**ಆಪಾದಿತರುಃ–**

1. **ಮಂಜುನಾಥ ಟಿ** ಬಿನ್ ಲೇಟ್ ತಮ್ಮೇಗೌಡ,
   ವಯಸ್ಸು ಸುಮಾರು 36 ವರ್ಷಗಳು,
   ರಾಜಕಾರಣಿ,

2. **ಬೀರಮ್ಮ** ಕೋಂ ಸಣ್ಣೇಗೌಡ,
   ವಯಸ್ಸು ಸುಮಾರು 38 ವರ್ಷಗಳು,
   ವ್ಯವಸಾಯ

3. **ಜ್ಯೋತಿ** ಕೋಂ ರಾಜು,
   ವಯಸ್ಸು ಸುಮಾರು 26 ವರ್ಷಗಳು, ಗೃಹಿಣಿ,

4. **ಪ್ರಕಾಶ ಎಸ್** ಬಿನ್ ಸಣ್ಣೇಗೌಡ,
   ವಯಸ್ಸು ಸುಮಾರು 22 ವರ್ಷಗಳು,
   ವ್ಯವಸಾಯ,

5. **ಸತೀಶ ಎಸ್** ಬಿನ್ ಸಣ್ಣೇಗೌಡ,
   ವಯಸ್ಸು ಸುಮಾರು 19 ವರ್ಷಗಳು,
   ವ್ಯವಸಾಯ

6. **ಮಹಾದೇವಸ್ವಾಮಿ ಜೆ** ಬಿನ್ ಜವರಶೆಟ್ಟಿ
   ವಯಸ್ಸು ಸುಮಾರು 22 ವರ್ಷಗಳು,
   ವ್ಯವಸಾಯ,

7. **ಮನು ಜೆ** ಬಿನ್ ಜವರಶೆಟ್ಟಿ
   ವಯಸ್ಸು ಸುಮಾರು 19 ವರ್ಷಗಳು, ವ್ಯವಸಾಯ,

8. **ನಿಂಗಶೆಟ್ಟಿ @ ನಿಂಗಣ್ಣ** ಬಿನ್ ಸಿದ್ದಶೆಟ್ಟಿ
ವಯಸ್ಸು ಸುಮಾರು 33 ವರ್ಷಗಳು,
ವ್ಯವಸಾಯ,

9. **ರಾಮಸ್ವಾಮಿ** ಬಿನ್ ಜವರಶೆಟ್ಟಿ
ವಯಸ್ಸು ಸುಮಾರು 32 ವರ್ಷಗಳು,
ವ್ಯವಸಾಯ

10. **ಮರಿಗೌಡ** ಬಿನ್ ತಮ್ಮಣ್ಣೇಗೌಡ,
ವಯಸ್ಸು ಸುಮಾರು 40 ವರ್ಷಗಳು,
ವ್ಯವಸಾಯ,

11. **ರಾಜು** ಬಿನ್ ತಮ್ಮಣ್ಣೇಗೌಡ,
ವಯಸ್ಸು ಸುಮಾರು 31 ವರ್ಷಗಳು,
ವ್ಯವಸಾಯ,

12. **ತಮ್ಮೇಗೌಡ** ಬಿನ್ ಸಣ್ಣೇಗೌಡ,
ವಯಸ್ಸು ಸುಮಾರು 72 ವರ್ಷಗಳು,
ವ್ಯವಸಾಯ,

**ಎಲ್ಲರೂ ವಾಸಃ** ಚಾಮಲಾಪುರ ಗ್ರಾಮ,
ಹೆಚ್ ಡಿ ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

## <u>ದೋಷಾರೋಪಣೆ</u>

ನಾನು ಟಿ.ಗೋವಿಂದಯ್ಯ., ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಹುಣಸೂರು ಪೀಠ, ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ,

ದಿನಾಂಕ 23-04-2016 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಹೆಚ್ ಡಿ ಕೋಟೆ ಪೊಲೀಸ್ ಠಾಣಾ ಸರಹದ್ದು ಚಾಮಲಾಪುರ ಗ್ರಾಮದ ಚಾಸಾ-1-ತಾಯಮ್ಮರವರ ಮನೆಯ ಮುಂದೆ ಚಾಸಾ-1-ತಾಯಮ್ಮ ರವರ ಗಂಡ ಮೃತ ದಾಸಶೆಟ್ಟಿರವರು ಕುಳಿತುಕೊಂಡು ತನ್ನ ಸೊಸೆ ಮತ್ತು ಮಕ್ಕಳಿಗೆಲ್ಲಾ ಹೊಡೆದು ಗಲಾಟೆ ಮಾಡಿದರಲ್ಲಾ ಎಂದು ಯೋಚನೆ ಮಾಡುತ್ತಾ ಕುಳಿತಿದ್ದಾಗ ಆರೋಪಿಗಳಾದ ನೀವು ಗಲಾಟೆ ಮಾಡಲು ಅಕ್ರಮ ಗುಂಪುಕಟ್ಟಿಕೊಂಡು ಬಂದಿದ್ದು, ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ಅಡಿ ಅಪರಾಧವೆಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಗಳಾದ ನೀವು ಗಲಾಟೆ ಮಾಡಲು ಅಕ್ರಮವಾಗಿ ಗುಂಪುಕಟ್ಟಿಕೊಂಡು ಚಾಸಾ-1-ತಾಯಮ್ಮ ರವರ ಮನೆಯ ಮುಂದೆ ಬಂದು ಮೃತ ದಾಸಶೆಟ್ಟಿ ರವರನ್ನು ಉದ್ದೇಶಿಸಿ "ನೀನಿನ್ನು ಸಾಯದೆ ಬದುಕಿದ್ದೀಯಾ, ಬೇಗ ಸಾಯಿ ಮುಂಡೆ ಮಗನೇ" ಎಂದು ಆರೋಪಿಗಳಾದ ನೀವು ಬೈಯ್ದಿದ್ದಕ್ಕೆ ಹಾಗೂ "ನಿನ್ನಿಂದಲೇ ಗಲಾಟೆ ಆಗಿರುವುದೆಂದು" ಬೈಯ್ದು ನಿಂದಿಸಿದ ಕಾರಣ ದಾಸೆಟ್ಟಿರವರು ಮನನೊಂದು ಯಾವುದೋ ಕ್ರಿಮಿನಾಶಕವನ್ನು ಕುಡಿದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು ಭಾರತೀಯ ದಂಡ ಸಂಹಿತೆ ಕಲಂ 306 ಸಹವಾಚಕ 149 ರಡಿ ಅಪರಾಧವೆಸಗಿರುತ್ತೀರಿ.

ಈ ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿಮ್ಮನ್ನು ಅಧಿವಿಚಾರಣೆಗೆ ಒಳಪಡಿಸಲು ಆದೇಶಿಸುತ್ತಿದ್ದೇನೆ.

**(ಟಿ.ಗೋವಿಂದಯ್ಯ)**
ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.